# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1263
ಸದಸ್ಯರ ಹೆಸರು : ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 19.12.2024
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ನೀರಾವರಿ ಯೋಜನೆಗಳು ಜಾರಿಯಾಗಿವೆ; ಅವುಗಳಿಗೆ ಮೀಸಲಿಟ್ಟ ಅನುದಾನ ಎಷ್ಟು; ಇವುಗಳಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗಳಿಸಲಾಗಿದೆ; | ಕಲಬುರಗಿ ಜಿಲ್ಲೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮ & ಕರ್ನಾಟಕ ನೀರಾವರಿ ನಿಗಮದಡಿ ಅನುಷ್ಠಾನಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳ 2024-25ನೇ ಸಾಲಿನಲ್ಲಿ ಒದಗಿಸಲಾದ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ಪೂರ್ಣಗೊಂಡ ಯೋಜನೆಗಳಿಂದ ಸೃಷ್ಟಿಸಲಾದ ನೀರಾವರಿ ಕ್ಷೇತ್ರಕ್ಕೆ ನೀರು ಹರಿಸಲಾಗಿದ್ದು, ರೈತರು ನೀರಿನ ಉಪಯೋಗ ಪಡೆದುಕೊಳ್ಳುತ್ತಿರುತ್ತಾರೆ. |
| ಆ) | ಜಿಲ್ಲೆಯಲ್ಲಿ ನೀರಿನ ಲಭ್ಯತೆ ಇದ್ದರು ಅದನ್ನು ಸಮರ್ಪಕವಾಗಿ ರೈತರ ಜಮೀನುಗಳಿಗೆ ತಲುಪಿಸುವ ಒಂದೇ ಒಂದು ಯೋಜನೆಯ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳದಿರಲು ಕಾರಣವೇನು; | |
| ಇ) | ಸೊನ್ನ ನೀರಾವರಿ ಯೋಜನೆಯನ್ನು ಎಷ್ಟು ಕೋಟಿ ವೆಚ್ಚದಲ್ಲಿ ಅನುಷ್ಠಾನ ಮಾಡಲಾಗಿದೆ; ಹಾಗೂ ಕಾಗಿಣಾ ಏತ ನೀರಾವರಿ ಯೋಜನೆ ಜಾರಿಗಳಿಸುವ ಬಗ್ಗೆ ಸರ್ಕಾರದ ನಿಲುವೇನು; ಮತ್ತು ಜೇವರ್ಗಿ ಭಾಗದಲ್ಲಿ ಮೂರು ದಶಕಗಳಿಂದ ನಡೆಯುತ್ತಿರುವ ಮಲ್ಲಬಾದ ಏತ ನೀರಾವರಿ ಯೋಜನೆಗೆ ಎಷ್ಟು ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ; ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು ಜಿಲ್ಲೆಯ ಸಮಗ್ರ ನೀರಾವರಿ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | ಭೀಮಾ (ಸೊನ್ನ) ನೀರಾವರಿ ಯೋಜನೆಯನ್ನು ರೂ.964.00 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಕಾಗಿಣಾ ನದಿಯಿಂದ ನೀರನ್ನು ಎತ್ತಿ ಕಲಬುರಗಿ ಜಿಲ್ಲೆಯ ಸೇಡಂ, ಚಿತ್ತಾಪುರ, ಚಿಂಚೋಳಿ ತಾಲ್ಲೂಕಿನ 4,105 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ರೂ.143.80 ಕೋಟಿ ಅಂದಾಜು ಮೊತ್ತದ ಯಡ್ಡಳ್ಳಿ ಮತ್ತು ತೆರ್ನಳ್ಳಿ ಏತ ನೀರಾವರಿ ಯೋಜನೆಗೆ ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿದೆ.<br><br>ಮಲ್ಲಬಾದ ಏತ ನೀರಾವರಿ ಯೋಜನೆಗೆ ಇಲ್ಲಿಯವರೆಗೆ ರೂ.279.00 ಕೋಟಿ ವೆಚ್ಚ ಭರಿಸಲಾಗಿದೆ. ಯೋಜನೆಯ ಅನುಷ್ಠಾನವು ಕೃಷ್ಣಾ ನ್ಯಾಯಾಧಿಕರಣ-2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪು ಇನ್ನೂ ಅಧಿಸೂಚನೆ ಆಗಬೇಕಾಗಿದೆ. ಆದಾಗ್ಯೂ ಸಮಾನಾಂತರವಾಗಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, ಅದರಂತೆ ಕ್ರಮ ಜರುಗಿಸಲಾಗುತ್ತಿದೆ.<br><br>ಕಲಬುರಗಿ ಜಿಲ್ಲೆಯ ಪ್ರಗತಿಯಲ್ಲಿರುವ ಯೋಜನೆಗಳನ್ನು ಆದ್ಯತೆ ಹಾಗೂ ಅನುದಾನ ಲಭ್ಯತೆ ಅನುಸಾರ ಹಂತ ಹಂತವಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |

ಸಂಖ್ಯೆ: ಜಸಂಇ 161 ಎಂಎಲ್ಎ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

**ಅನುಬಂಧ**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1263 ಕ್ಕೆ ಮಾಹಿತಿಗಳು**

| ಕ್ರ. ಸಂ | ಯೋಜನೆ ಹೆಸರು | 2024-25 ನೇ ಸಾಲಿನಲ್ಲಿ ಮೀಸಲಿಟ್ಟ ಅನುದಾನ (ರೂ. ಲಕ್ಷಗಳಲ್ಲಿ) | ಕಲ್ಪಿಸಲಾಗಿರುವ ನೀರಾವರಿ ಸಾಮರ್ಥ್ಯ (ಹೆಕ್ಟೇರ್) | ಷರಾ |
|---|---|---|---|---|
| 1 | ಕೆಳದಂಡೆ ಮುಲ್ಲಾಮಾರಿ | 58.28 | 9,713 | ಪೂರ್ಣಗೊಂಡಿದ |
| 2 | ಗಂಡೋರಿ ನಾಲಾ | 47.66 | 7,943 | ಪೂರ್ಣಗೊಂಡಿದ |
| 3 | ಅಮರ್ಜಾ | 52.79 | 8,903 | ಪೂರ್ಣಗೊಂಡಿದ |
| 4 | ಬೆಣ್ಣೆತೋರಾ | 266.18 | 20,234 | ಪೂರ್ಣಗೊಂಡಿದ |
| 5 | ಚಂದ್ರಂಪಳ್ಳಿ | 31.34 | 5,223 | ಪೂರ್ಣಗೊಂಡಿದ |
| 6 | ಭೀಮಾ (ಸೊನ್ನ) ಏತ ನೀರಾವರಿ ಯೋಜನೆ | 145.63 | 24,292 | ಪೂರ್ಣಗೊಂಡಿದ |
| 7 | ಯಡಳ್ಳಿ-ತೇರ್ನಳ್ಳಿ (ಕಾಗಿಣಾ) ಏತ ನೀರಾವರಿ ಯೋಜನೆ | 709.00 | 4,105 | ಪ್ರಗತಿಯಲ್ಲಿದೆ. |
| 8 | ಐನಾಪುರ ಏತ ನೀರಾವರಿ | 1009.00 | 3,710 | ಟೆಂಡರ್ ಪ್ರಗತಿಯಲ್ಲಿದೆ. |
| 9 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 & 2 ರಡಿ ಬರುವ ಜೇವರ್ಗಿ, ಇಂಡಿ & ಮುಡಬಾಳ ಶಾಖಾ ಕಾಲುವೆಗಳು | 73.00 | 1,93,984 | ಪೂರ್ಣಗೊಂಡಿದೆ |
| 10 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಬರುವ ಮಲ್ಲಾಬಾದ್ ಏತ ನೀರಾವರಿ ಯೋಜನೆ | 3500.00 | 28,107 | ಪ್ರಗತಿಯಲ್ಲಿದೆ. |
| 11 | ಸನ್ನತಿ ಏತ ನೀರಾವರಿ ಯೋಜನೆ | 500.00 | 16,000 | ಪ್ರಗತಿಯಲ್ಲಿದೆ. |